

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02–09–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಕಾಲದ ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಹಿಜರೀ 13ರಲ್ಲಿ ಡಮಸ್ಕಸನ್ನು ಜಯಿಸಲಾಯಿತು. ಈ ಸಂಬಂಧವಾಗಿ ಸ್ವಲ್ಪ ವಿವರಿಸುವೆನು. ಇದು ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ನಡೆದ ಕೊನೆಯ ಯುದ್ಧವಾಗಿತ್ತು.

ಹಝ್ರತ್ ಅಬೂಬಕರ್(ರ) ಸಿರಿಯದ ಕಡೆಗೆ ಅನೇಕ ಸೈನ್ಯಗಳನ್ನು ಕಳುಹಿಸಿದರು. ಹಝ್ರತ್ ಅಬೂ ಉಬೈದ್(ರ)ರನ್ನು ಒಂದು ಸೇನೆಯ ಅಮೀರ್‌ರನ್ನಾಗಿ ಮಾಡಿ ಡಮಸ್ಕಸಿನ ಸಮೀಪವಿರುವ ಸಿರಿಯದ ಒಂದು ಪ್ರಾಚೀನ, ಪ್ರಸಿದ್ಧ ಮತ್ತು ದೊಡ್ಡ ಪಟ್ಟಣವಾದ ಹಿಮಸಿಗೆ ತಲುಪಲು ಆದೇಶ ನೀಡಿದರು. ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಡಮಸ್ಕಸಿಗೆ ತಲುಪಿ ಇಸ್ಲಾಮಿನ ಇತರ ಸೇನೆಗಳೊಂದಿಗೆ ಅದಕ್ಕೆ ಮುತ್ತಿಗೆ ಹಾಕಿದರು. ಹೀಗೆ 20 ದಿನಗಳು ಕಳೆದುವು. ಆದರೆ ಯಾವುದೇ ಫಲಿತಾಂಶ ಬರಲಿಲ್ಲ. ಅದೇ ವೇಳೆ ಹಿರ್ಕಲ್ ಅರಸನು ಅಜ್ನಾದೈನ್ ಪ್ರದೇಶದಲ್ಲಿ ರೋಮನರ ದೊಡ್ಡದಾದ ಒಂದು ಸೈನ್ಯವನ್ನು ಒಟ್ಟುಗೂಡಿಸಿರುವನು ಎಂಬ ಸುದ್ದಿ ಮುಸ್ಲಿಮರಿಗೆ ಲಭಿಸಿತು. ಈ ವಾರ್ತೆ ಕೇಳಿದ ಕೂಡಲೇ ಹಝ್ರತ್ ಖಾಲಿದ್(ರ) ಪೂರ್ವ ಭಾಗದ ಹೆಬ್ಬಾಗಿಲಿನ ಬಳಿಯಿಂದ ಹೊರಟು ಜಾಬಿಯದ ಕಡೆಯಲ್ಲಿರುವ ಹೆಬ್ಬಾಗಿಲಿನ ಸಮೀಪ ಇದ್ದ ಹಝ್ರತ್ ಅಬೂಉಬೈದ್(ರ)ರ ಬಳಿಗೆ ಬಂದರು ಮತ್ತು ಅವರಿಗೆ ಸ್ಥಿತಿಗತಿಗಳನ್ನು ತಿಳಿಸುತ್ತಾ, ನಾವು ಡಮಸ್ಕಸಿನ ಮುತ್ತಿಗೆಯನ್ನು ಉಪೇಕ್ಷಿಸಿ ಅಜ್ನಾದೈನಿನಲ್ಲಿರುವ ರೋಮಿನ ಸೈನ್ಯವನ್ನು ಎದುರಿಸಲು ಹೋಗೋಣ ಮತ್ತು ಅಲ್ಲಾಹನು ನಮಗೆ ವಿಜಯ ದಯಪಾಲಿಸಿದರೆ ನಾವು ಇಲ್ಲಿಗೆ ಮರಳಿ ಬರೋಣವೆಂಬ ತನ್ನ ಸಲಹೆಯನ್ನು ನೀಡಿದರು. ಹಝ್ರತ್ ಅಬೂ ಉಬೈದ್(ರ) ಹೇಳಿದರು: ನನ್ನ ಅಭಿಪ್ರಾಯ ಇದಕ್ಕೆ ತದ್ವಿರುದ್ಧವಾಗಿದೆ. ಹಝ್ರತ್ ಖಾಲಿದ್(ರ) ಹಝ್ರತ್ ಅಬೂಉಬೈದ್(ರ)ರ ಅಭಿಪ್ರಾಯವನ್ನು ಒಪ್ಪಿಕೊಂಡು ಮುತ್ತಿಗೆಯನ್ನು ಮುಂದುವರೆಸಿದರು. ಹೀಗೆ ಡಮಸ್ಕಸ್‌ಗೆ ಮುತ್ತಿಗೆ ಹಾಕಿ 21 ದಿನಗಳು ಕಳೆದುವು. ದಾಳಿಯ ತೀವ್ರತೆಯನ್ನು ವರ್ಧಿಸಲು ಮುಸ್ಲಿಮರನ್ನು ಹುರಿದುಂಬಿಸುತ್ತಾ ಹಝ್ರತ್ ಖಾಲಿದ್(ರ) ಸ್ವತಃ ಪೂರ್ವ ಭಾಗದ ಹೆಬ್ಬಾಗಿಲ ಬಳಿಯಿಂದ ಒಂದರ ನಂತರ ಮತ್ತೊಂದು ಎಂಬಂತೆ ದಾಳಿಗಳನ್ನು ಮಾಡಲು ಆರಂಭಿಸಿದರು. ಅವರು ಹೀಗೆ ಯುದ್ಧದಲ್ಲಿ ನಿರತರಾಗಿದ್ದಾಗ, ಗೋಡೆಯ ಮೇಲೆ ಇದ್ದ ರೋಮನರು ಅಚಾನಕ್ಕಾಗಿ ಚಪ್ಪಾಲೆ ತಟ್ಟುತ್ತಾ ಕುಣಿದಾಡುವುದಾಗಿಯೂ ಸಂತೋಷವನ್ನು ಪ್ರಕಟಿಸುತ್ತಿರುವುದಾಗಿಯೂ ಅವರು ಕಂಡರು. ಮುಸ್ಲಿಮರು ಅಚ್ಚರಿಯಿಂದ ಅವರನ್ನು ನೋಡುತ್ತಿದ್ದರು. ಹಝ್ರತ್ ಖಾಲಿದ್(ರ) ಒಂದು ದಿಕ್ಕಿನ ಕಡೆಗೆ ನೋಡಿದಾಗ, ಆ ಕಡೆಯಿಂದ ಬಹಳವಾಗಿ ಧೂಳು ಏಳುತ್ತಿರುವುದಾಗಿ ಕಂಡುಬಂತು. ಅದರ ಕಾರಣದಿಂದ ಆಕಾಶ ಇರುಳಾಗಿ ಮತ್ತು ದಿನದ ಸಮಯದಲ್ಲೂ ಅಂಧಕಾರ ಹರಡಿದ್ದಾಗಿ ಕಾಣುತ್ತಿತ್ತು. ಡಮಸ್ಕಸ್ ನಿವಾಸಿಗಳ ನೆರವಿಗಾಗಿ ಹಿರ್ಕಲ್ ಅರಸನ ಸೈನ್ಯ ಬರುತ್ತಿದೆ ಎಂದು ಹಝ್ರತ್ ಖಾಲಿದ್(ರ)ರಿಗೆ ತಕ್ಷಣ ಗೊತ್ತಾಯಿತು.

ಹಝ್ರತ್ ಖಾಲಿದ್(ರ) ಕೂಡಲೇ ಹಝ್ರತ್ ಅಬೂಉಬೈದರಿಗೆ ಸ್ಥಿತಿಗತಿಗಳ ಬಗ್ಗೆ ತಿಳಿಸುತ್ತಾ ಹೀಗೆ ಹೇಳಿದರು: ಹಿರ್ಕಲ್ ಕಳುಹಿಸಿದ ಸೈನ್ಯವನ್ನು ಎದುರಿಸಲು ಪೂರ್ತಿ ಸೇನೆಯೊಂದಿಗೆ ಹೋಗಲು ನಾನು ನಿರ್ಧರಿಸಿದ್ದೇನೆ. ಇದರ ಕುರಿತು ನಿಮ್ಮ ಅಭಿಪ್ರಾಯವೇನು. ಹಝ್ರತ್ ಅಬೂಉಬೈದ್(ರ) ಹೇಳಿದರು: ಅದು ಸರಿಯಲ್ಲ. ಏಕೆಂದರೆ, ನಾವು ಈ ಜಾಗವನ್ನು ಬಿಟ್ಟರೆ ಕೋಟೆಯೊಳಗಿನ ನಿವಾಸಿಗಳು ಹೊರಗೆ ಬಂದು ನಮ್ಮೊಡನೆ ಯುದ್ಧ ಮಾಡುವರು. ಹಾಗೆ ನಾವು ರೋಮನರ ಎರಡು ಸೈನ್ಯಗಳ ನಡುವೆ ಸಿಲುಕಿ ವಿಪತ್ತಿಗೆ ತುತ್ತಾಗುವೆವು. ಆಗ ಹಝ್ರತ್ ಖಾಲಿದ್(ರ) ಬೇರೇನು ಸಲಹೆ ನೀಡುವಿರಿ ಎಂದು ಕೇಳಿದಾಗ ಹಝ್ರತ್ ಅಬೂಉಬೈದ್(ರ) ಹೇಳಿದರು: ನೀವು ಒಬ್ಬ ಶೂರ ಮತ್ತು ಧೀರನಾದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡು, ಅವನ ಜೊತೆಗೆ ಒಂದು ಸಂಘವನ್ನು ಶತ್ರುಗಳನ್ನು ಎದುರಿಸಲು ಕಳುಹಿಸಿರಿ. ಹಾಗೆ ಹಝ್ರತ್ ಖಾಲಿದ್(ರ) ಹಝ್ರತ್ ಝಿರಾರ್ ಬಿನ್ ಅಝ್‌ವರ್(ರ)ರನ್ನು ಐನೂರು ಸವಾರ ಸೈನಿಕರೊಂದಿಗೆ ರೋಮನ ಸೈನ್ಯವನ್ನು ಎದುರಿಸಲು ಕಳುಹಿಸಿದರು. ಮತ್ತೊಂದು ವರದಿಯಲ್ಲಿ ಸೈನಿಕರ ಸಂಖ್ಯೆ ಐದು ಸಾವಿರವಾಗಿತ್ತು ಎಂದೂ ಬಂದಿದೆ.

ಮುಸ್ಲಿಮರು ಶೌರ್ಯದಿಂದ ರೋಮನರ ಸೈನ್ಯದ ಮೇಲೆ ನಿರಂತರ ದಾಳಿ ನಡೆಸಿದರು. ರೋಮನರ ಸೇನಾಧಿಪತಿಯ ಪುತ್ರನು ಹಝ್ರತ್ ಝಿರಾರ್(ರ)ರ ಮೇಲೆ ಹಲ್ಲೆ ನಡೆಸಿದನು. ಅವರ ಎಡ ತೋಳಿನ ಮೇಲೆ ಈಟಿಯನ್ನು ಎಸೆದನು. ಅದರ ಕಾರಣದಿಂದ ತೋಳಿನಿಂದ ಬಹಳವಾಗಿ ರಕ್ತ ಹರಿಯಲು ಆರಂಭಿಸಿತು. ಆದರೆ ಮರುಕ್ಷಣದಲ್ಲಿ ಹಝ್ರತ್ ಝಿರಾರ್(ರ) ಅವನ ಎದೆಯ ಮೇಲೆ ಈಟಿಯನ್ನು ಎಸೆದು ಆತನನ್ನು ವಧಿಸಿದರು. ಈಟಿ ಅವನ ಎದೆಯಲ್ಲಿ ಸಿಲುಕಿತು ಮತ್ತು ಅದರ ತುದಿ ಭಾಗ ತುಂಡಾಯಿತು. ತುದಿ ಭಾಗಯಿಲ್ಲದ ಈಟಿಯನ್ನು ಮಾತ್ರ ಹಿಡಿದುಕೊಂಡು ನಿರಾಯುಧರಾಗಿ ನಿಂತಿದ್ದ ಹಝ್ರತ್ ಝಿರಾರ್(ರ)ರನ್ನು ರೋಮನರ ಸೈನಿಕರು ಕಂಡಾಗ, ಅವರ ಬಳಿಗೆ ಬೇಗನೇ ಬಂದು ಅವರನ್ನು ಬಂಧಿಸಿದರು. ಈ ಸುದ್ದಿ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ತಲುಪಿದಾಗ ಅವರು ಬಹಳ ಚಿಂತಿತರಾದರು. ಜೊತೆಗಾರರಿಂದ ರೋಮನರ ಸೈನ್ಯದ ಕುರಿತು ಮಾಹಿತಿ ಪಡೆದು ಹಝ್ರತ್ ಅಬೂ ಉಬೈದ್(ರ)ರಿಂದ ಸಲಹೆ ಕೇಳಿದರು. ಅವರು ಹೇಳಿದರು: ಡಮಸ್ಕಸ್ ಮುತ್ತಿಗೆಗೆ ತಕ್ಕುದಾದ ಏರ್ಪಾಡು ಮಾಡಿಕೊಂಡು ನೀವು ಹಿರ್ಕಲಿನ ಸೈನ್ಯದ ಮೇಲೆ ದಾಳಿ ನಡೆಸಬಹುದಾಗಿದೆ.

ಇದೇ ವೇಳೆ ಮುಸ್ಲಿಮರ ಸೈನ್ಯದ ಮುಂದೆ ಕೆಂಪು ಕುದುರೆಯಲ್ಲಿ ಸವಾರರಾಗಿಕೊಂಡು ಯುದ್ಧ ಕವಚದ ಮೇಲೆ ಬಟ್ಟೆಯನ್ನು ಧರಿಸಿದ್ದ ಅಪರಿಚಿತನಾದ ಒಬ್ಬ ಕುದುರೆ ಸವಾರ ಕಂಡುಬಂತು. ಆ ವ್ಯಕ್ತಿಯ ವೇಷ ವಿನ್ಯಾಸಗಳಿಂದ ಧೈರ್ಯ, ಬುದ್ಧಿವಂತಿಕೆ, ಯುದ್ಧ ನಿಪುಣತೆ ಸ್ಪಷ್ಟವಾಗಿ ಕಾಣಬಹುದಾಗಿತ್ತು. ಆ

ಕುದುರೆ ಸವಾರ ಯಾರೆಂದು ಗೊತ್ತಾದರೆ ಎಷ್ಟು ಚೆನ್ನ ಎಂದು ಹಝ್ರತ್ ಖಾಲಿದ್(ರ) ಬಯಸಿದರು. ಇಸ್ಲಾಮಿನ ಸೈನ್ಯ ಸತ್ಯನಿಷೇಧಿಗಳ ಸಮೀಪಕ್ಕೆ ತಲುಪಿದಾಗ, ಪಕ್ಷಿಗಳ ಮೇಲೆ ಹದ್ದು ಹಲ್ಲೆ ನಡೆಸುವ ರೀತಿಯಲ್ಲಿ ಆ ವ್ಯಕ್ತಿ ಅವರ ಮೇಲೆ ಶೌರ್ಯದಿಂದ ದಾಳಿ ನಡೆಸಿದರು. ಮಾತ್ರವಲ್ಲ, ಆ ವ್ಯಕ್ತಿಯ ಪ್ರಥಮ ದಾಳಿಯಿಂದಲೇ ಶತ್ರುಗಳ ಸೈನ್ಯ ಕಂಗಾಲಾಯಿತು. ಆ ವ್ಯಕ್ತಿ ಅನೇಕರನ್ನು ವಧಿಸಿದರು. ನೀವು ಯಾರೆಂದು ಹಝ್ರತ್ ಖಾಲಿದ್(ರ) ಒತ್ತಾಯ ಪೂರ್ವಕವಾಗಿ ಕೇಳಿದಾಗ, ಆ ವ್ಯಕ್ತಿ, ನಾನು ಝಿರಾರಿನ ಸಹೋದರಿ ಖೌಲ ಬಿನ್ತ್ ಅಝ್ವರ್ ಆಗಿರುವೆ, ಸಹೋದರನ ಬಂಧನದ ಬಗ್ಗೆ ಗೊತ್ತಾದಾಗ, ನೀವು ಈಗ ನೋಡಿದ್ದನ್ನು ಮಾಡಲು ನಾನು ಬಂದೆ ಎಂದು ಹೇಳಿದರು.

ಹಝ್ರತ್ ಖಾಲಿದ್(ರ)ರ ಸಮರ್ಥವಾದ ದಾಳಿಯ ಪರಿಣಾಮವಾಗಿ ರೋಮನರು ದುರ್ಬಲಗೊಂಡರು. ಅವರ ಸೈನ್ಯ ಚೆಲ್ಲಾಪಿಲ್ಲಿಯಾಯಿತು. ಧೈರ್ಯದ ಕೌಶಲವನ್ನು ಪ್ರಕಟಿಸಿದ ಹಝ್ರತ್ ರಾಫಿಅ್(ರ)ರೊಡನೆ ಹಝ್ರತ್ ಖಾಲಿದ್(ರ) ಹೇಳಿದರು: ನಿಮಗೆ ಇಲ್ಲಿಯ ರಸ್ತೆಗಳ ಬಗ್ಗೆ ಅರಿವಿದೆ. ಆದ್ದರಿಂದ ನಿಮ್ಮ ಇಷ್ಟ ಪ್ರಕಾರದ ಕೆಲವು ಯುವಕರನ್ನು ಕೊಂಡು ಹೋಗಿ, ಶತ್ರುಗಳು ಹಿಮಸ್ ತಲುಪುವುದಕ್ಕೆ ಮುಂಚಿತವಾಗಿ ಹಝ್ರತ್ ಝಿರಾರ್(ರ)ರನ್ನು ಬಂಧನ ಮುಕ್ತಗೊಳಿಸಿರಿ ಮತ್ತು ತನ್ನ ಪ್ರಭುವಿನಿಂದ ಪ್ರತಿಫಲ ಪಡೆಯಿರಿ. ಅವರು ಹೋಗುವಷ್ಟರಲ್ಲಿ, ಅವರ ಜೊತೆಗೆ ಹೋಗಲು ಬಹಳವಾಗಿ ವಿನಂತಿ ಮಾಡುತ್ತಾ ಹಝ್ರತ್ ಖೌಲ(ರ) ಅನುಮತಿ ಪಡೆದರು. ಅನಂತರ ಮಾಡಿದ ದಾಳಿಯ ಮೂಲಕ ಹಝ್ರತ್ ಝಿರಾರ್(ರ)ರನ್ನು ಅಲ್ಲಾಹನು ಬಂಧಮುಕ್ತಗೊಳಿಸಿದನು.

ಮತ್ತೊಂದೆಡೆ ಇಸ್ಲಾಮಿನ ಸೈನ್ಯ ಡಮಸ್ಕಸಿನಲ್ಲಿ ಇತ್ತು. ಕೋಟೆಯ ಮುತ್ತಿಗೆ ಜಾರಿಯಲ್ಲಿರುವಾಗಲೇ ಹಝ್ರತ್ ಉಬಾದ ಬಿನ್ ಸಈದ್(ರ) ಹಝ್ರತ್ ಖಾಲಿದ್(ರ)ರ ಬಳಿಗೆ ಬಂದು ಹೀಗೆ ತಿಳಿಸಿದರು: ರೋಮನರ ತೊಂಬತ್ತು ಸಾವಿರ ಸೈನಿಕರು ಅಜ್ನಾದೈನಿನಲ್ಲಿ ಬಂದು ಸೇರಿರುವರು. ಹಝ್ರತ್ ಖಾಲಿದ್(ರ) ಹಝ್ರತ್ ಅಬೂ ಉಬೈದ(ರ)ರೊಡನೆ ಸಲಹೆ ಕೇಳಿದಾಗ, ಅವರು ಹೇಳಿದರು: ನಮ್ಮ ಸೇನೆಗಳು ಸಿರಿಯ ದೇಶದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿವೆ. ಆದ್ದರಿಂದ ಅಜ್ನಾದೈನಿನಲ್ಲಿ ನಮ್ಮನ್ನು ಬಂದು ಭೇಟಿಯಾಗಲು ಅವರೆಲ್ಲರಿಗೂ ಪತ್ರ ಬರೆಯಿರಿ. ನಾವು ಸಹ ಈಗ ಡಮಸ್ಕಸಿನ ಕೋಟೆಯ ಮುತ್ತಿಗೆಯನ್ನು ಉಪೇಕ್ಷಿಸಿ ಅಜ್ನಾದೈನಿನ ಕಡೆಗೆ ಹೋಗುವೆವು. ಒಂದೆಡೆ ಮುಸ್ಲಿಮರ ಸೈನ್ಯ ಅಲ್ಲಿಂದ ಹೊರಟಿತು ಮತ್ತೊಂದೆಡೆ ಹಿರ್ಕಲಿನ ಅತ್ಯಂತ ವಿಶ್ವಸ್ತ ಮತ್ತು ಉನ್ನತ ಮಟ್ಟದ ಬಿಲ್ಲುಗಾರನಾದ ಪೌಲ್ (Paul) ಎಂಬ ಹೆಸರಿನ ಒಬ್ಬ ವ್ಯಕ್ತಿಯ ಬಳಿ ಡಮಸ್ಕಸ್ ನಿವಾಸಿಗಳು ಬಂದು ಸೇರಿದರು. ಆ ವ್ಯಕ್ತಿ ಇದಕ್ಕಿಂತ ಮುಂಚೆ ಯಾವುದೇ ಯುದ್ಧದಲ್ಲಿ ಮುಸ್ಲಿಮರ ಎದುರಾಗಿ ಬಂದಿರಲಿಲ್ಲ. ಡಮಸ್ಕಸಿನ ಜನರು ಅವನನ್ನು ತಮ್ಮ ಸೇನಾದಿಪತಿಯನ್ನಾಗಿ ಮಾಡಿದರು ಮತ್ತು ಎಲ್ಲ ವಿಧದ ಲಾಲಸೆಯನ್ನು ನೀಡಿ ಅವನನ್ನು ಯುದ್ಧಕ್ಕಾಗಿ ಹುರಿದುಂಬಿಸಿದರು. ಅವನು ಅತ್ಯಂತ ವೇಗವಾಗಿ 6 ಸಾವಿರ ಸವಾರರು ಮತ್ತು 10 ಸಾವಿರ ಕಾಲಾಳು ಸೈನಿಕರ ಜೊತೆಗೆ ಮುಸ್ಲಿಮರನ್ನು ಎದುರಿಸಲು ಹೊರಟನು. ಹಝ್ರತ್ ಅಬೂ ಉಬೈದ(ರ) ಪೌಲ್‌ನೊಂದಿಗೆ ಯುದ್ಧದಲ್ಲಿ ನಿರತರಾಗಿದ್ದಾಗ, ವಿವಿಧ ಪ್ರದೇಶಗಳಿಂದ ಬಂದ ಮುಸ್ಲಿಮರ ಸೈನ್ಯಗಳು ಎಂತಹ ದಾಳಿ ನಡೆಸಿತು ಎಂದರೆ, ಡಮಸ್ಕಸಿನಿಂದ ಬಂದು ದಾಳಿ ನಡೆಸುತ್ತಿದ್ದ ರೋಮನರಿಗೆ ತಮಗೆ ಖಂಡಿತ ಪರಾಜಯ ಮತ್ತು ಅಪಮಾನ ಉಂಟಾಗುವುದು ಎಂದು ಖಚಿತವಾಯಿತು. ಹಝ್ರತ್ ಝಿರಾರ್(ರ) ಬೆಂಕಿಯ ಜ್ವಾಲೆಯ ಹಾಗೆ ಪೌಲನ ಕಡೆಗೆ ಧಾವಿಸಿದರು. ಬಂದದ್ದು ಹಝ್ರತ್ ಝಿರಾರ್(ರ) ಆಗಿರುವರು ಎಂದು ಅವನಿಗೆ ಗೊತ್ತಾದಾಗ ಅವನು ನಡುಗಿದನು ಮತ್ತು ಓಡಿ ಹೋದನು. ಹಝ್ರತ್ ಝಿರಾರ್(ರ) ಅವನನ್ನು ಹಿಂಬಾಲಿಸಿದರು. ಆತನನ್ನು ಜೀವಂತವಾಗಿಯೇ ಹಿಡಿದು ಬಂಧಿಸಿದರು. ಈ ಯುದ್ಧದಲ್ಲಿ ಸತ್ಯನಿಷೇಧಿಗಳ ಆರು ಸಾವಿರ ಜನರಲ್ಲಿ ಹೆಚ್ಚೆಂದರೆ ನೂರು ವ್ಯಕ್ತಿಗಳು ಜೀವಂತವಾಗಿ ಬಚಾವಾಗಿರಬಹುದು. ಮತ್ತೊಂದೆಡೆ ಪೌಲನ ಸಹೋದರ ಪೀಟರ್ ಕಾಲಾಳು ಸೈನಿಕರೊಂದಿಗೆ ಮಹಿಳೆಯರ ಕಡೆಗೆ ಧಾವಿಸಿದನು. ಕೆಲವು ಮಹಿಳೆಯರನ್ನು ಬಂಧಿಸಿ ಡಮಸ್ಕಸ್ ಕಡೆಗೆ ಮರಳಿ ಹೋದನು. ಹಝ್ರತ್ ಖೌಲ(ರ)ರನ್ನು ವಿರೋಧಿಗಳು ಬಂಧಿಸಿದ ಕಾರಣದಿಂದ ಹಝ್ರತ್ ಝಿರಾರ್(ರ) ಚಿಂತಿತರಾಗಿದ್ದರು. ಆಗ ಹಝ್ರತ್ ಖಾಲಿದ್(ರ) ಅವರನ್ನು ಸಮಾಧಾನಪಡಿಸಿದರು. ಮಾತ್ರವಲ್ಲ 2 ಸಾವಿರ ಸೈನಿಕರ ಜೊತೆಗೆ ಬಂಧಿತರಾದ ಮಹಿಳೆಯರನ್ನು ಹುಡುಕಲು ಸ್ವತಃ ಹೋದರು. ಇತರ ಮಹಿಳೆಯರ ಸುರಕ್ಷೆಗಾಗಿ ಉಳಿದ ಎಲ್ಲ ಸೈನಿಕರನ್ನು ಹಝ್ರತ್ ಉಬೈದ(ರ)ರಿಗೆ ಒಪ್ಪಿಸಿದರು.

ಮಹಿಳೆಯರನ್ನು ಬಂಧಿಸಿದ ಜಾಗಕ್ಕೆ ಹಝ್ರತ್ ಖಾಲಿದ್(ರ) ತಲುಪಿದಾಗ, ಅಲ್ಲಿ ಧೂಳು ಏಳುತ್ತಿರುವುದಾಗಿ ಕಂಡುಬಂತು. ಅಲ್ಲಿ ಯುದ್ಧವೇಕೆ ನಡೆಯುತ್ತಿದೆ ಎಂದು ಹಝ್ರತ್ ಖಾಲಿದ್(ರ) ಅಚ್ಚರಿಗೊಂಡರು. ವಿಚಾರಿಸಿದಾಗ ತಿಳಿದು ಬಂದದ್ದು ಏನೆಂದರೆ, ಪೀಟರ್ ಮಹಿಳೆಯರನ್ನು ಬಂಧಿಸಿ ನದಿಯ ಬಳಿ ತನ್ನ ಸಹೋದರ ಪೌಲನನ್ನು ಕಾಯುತ್ತಾ ನಿಂತಿದ್ದನು. ಅವರು ಮಹಿಳೆಯರನ್ನು ಪರಸ್ಪರ ವಿತರಿಸುತ್ತಿದ್ದರು. ಆ ಮಹಿಳೆಯರಲ್ಲಿ ಅನೇಕರು ಶೂರ, ಅನುಭವಿ ಕುದುರೆ ಸವಾರರು ಒಳಗೊಂಡಿದ್ದರು ಮತ್ತು ಅವರು ಎಲ್ಲ ರೀತಿಯ ಯುದ್ಧಗಳನ್ನು ಮಾಡಲು ನಿಪುಣರಾಗಿದ್ದರು. ಅವರೆಲ್ಲರೂ ಒಟ್ಟು ಸೇರಿದರು ಮತ್ತು ಹಝ್ರತ್ ಖೌಲ(ರ) ಅವರನ್ನು ಸಂಬೋಧಿಸುತ್ತಾ ಅವರೊಳಗೆ ಅಭಿಮಾನ ಮತ್ತು ಆವೇಶ ಉಂಟುಮಾಡಿದರು ಹಾಗೂ ಅವರ ಧೈರ್ಯವನ್ನು ವರ್ಧಿಸಿದರು. ಮಾತ್ರವಲ್ಲ ಡೇರೆಗಳ ಗೂಟಗಳ ಸಹಾಯದಿಂದ ಸರಪಳಿಯ ಕೊಂಡಿಗಳಂತೆ ಮಾಡಿ ಶತ್ರುಗಳ ಮೇಲೆ ದಾಳಿ ನಡೆಸಿದರು. ರೋಮನರು ಈ ಮಹಿಳೆಯರ ಧೈರ್ಯ ಮತ್ತು ಶೌರ್ಯವನ್ನು ನೋಡಿಕೊಂಡು ಆಶ್ಚರ್ಯಚಕಿತರಾದರು. ಶತ್ರುಗಳು ಪುನಃ ತಯಾರಿ ನಡೆಸಿದರು. ಆದರೆ ಅವರ ದಾಳಿಗೆ ಮುಂಚಿತವಾಗಿಯೇ ಮುಸ್ಲಿಮರು ಹಝ್ರತ್ ಖಾಲಿದ್(ರ)ರ ನೇತೃತ್ವದಲ್ಲಿ ಅಲ್ಲಿಗೆ ತಲುಪಿದರು. ಪೀಟರ್ ಮುಸ್ಲಿಮರನ್ನು ಕಂಡಾಗ ಆತಂಕಗೊಂಡು ಓಡಿ ಹೋದನು. ಹಝ್ರತ್ ಝಿರಾರ್(ರ) ಈಟಿಯಿಂದ ತೀವ್ರವಾಗಿ ಹಲ್ಲೆ ನಡೆಸಿ ಅವನನ್ನು ವಧಿಸಿದರು. ಈ ರೀತಿಯಾಗಿ ಪೌಲ್ ಕೂಡ ತನ್ನ ಸಹೋದರನ ಅಂತ್ಯವನ್ನು ತಿಳಿದಾಗ ಸ್ವಂತ ಇಷ್ಟ ಪ್ರಕಾರ ಹಝ್ರತ್ ಖಾಲಿದ್(ರ)ರ ಕೈಗಳಿಂದ ಕೊಲ್ಲಲ್ಪಟ್ಟನು.

ಅಜ್ನಾದೈನಿನ ವಿಜಯದ ನಂತರ ಡಮಸ್ಕಸಿನ ಕಡೆಗೆ ಮರಳಿ ಹೋಗಲು ಹಝ್ರತ್ ಖಾಲಿದ್(ರ) ಇಸ್ಲಾಮಿನ ಸೈನ್ಯಕ್ಕೆ ಆದೇಶ ನೀಡಿದರು. ಅಜ್ನಾದೈನಿನಲ್ಲಿ ರೋಮನರ ಸೈನ್ಯದ ಪರಾಜಯದ ಸುದ್ದಿ ಡಮಸ್ಕಸ್ ನಿವಾಸಿಗಳಿಗೆ ಮೊದಲೇ ಲಭಿಸಿತ್ತು. ಇಸ್ಲಾಮಿನ ಸೈನ್ಯವು ಡಮಸ್ಕಸ್‌ಗೆ ಬರುತ್ತಿರುವುದಾಗಿ ಗೊತ್ತಾದಾಗ ಅವರು ಬಹಳ

ಗಾಬರಿಗೊಂಡರು. ಡಮಸ್ಕಸಿನ ಸುತ್ತಮುತ್ತ ನೆಲೆಸಿದ್ದವರು ಓಡಿಹೋಗಿ ಕೋಟೆಯೊಳಗೆ ಅಭಯ ಪಡೆದರು. ಸಾಕಷ್ಟು ಪ್ರಮಾಣದಲ್ಲಿ ದವಸಧಾನ್ಯಗಳು ಮತ್ತು ಖರ್ಚಿಗೆ ಬೇಕಾದ ಸಾಮಾನುಗಳನ್ನು ಅವರು ಶೇಖರಿಸಿದರು. ಮಾತ್ರವಲ್ಲ, ಮುತ್ತಿಗೆ ಹಾಕಿದವರ ಮೇಲೆ ದಾಳಿ ನಡೆಸಲು ಯುದ್ಧ ಸಾಮಾನುಗಳನ್ನು ಕೂಡ ಒಟ್ಟುಗೂಡಿಸಿದರು. ಇಸ್ಲಾಮಿನ ಸೈನ್ಯ ಡಮಸ್ಕಸಿನ ಸಮೀಪ ಶಿಬಿರ ಹೂಡಿತು. ಅನಂತರ ಮುಂದಕ್ಕೆ ಹೋಗಿ ಕೋಟೆಗೆ ಮುತ್ತಿಗೆ ಹಾಕಿತು. ಡಮಸ್ಕಸಿನ ಸರದಾರರು ತಮ್ಮ ಅಧಿಕಾರಿಯಾದ ತೋಮಸ್‌ನೊಡನೆ ಹರ್ಕ್ಯುಲಸ್ ಚಕ್ರವರ್ತಿಯಿಂದ ಸಹಾಯ ಬೇಡಲು ಅಥವಾ ಮುಸ್ಲಿಮರೊಡನೆ ಸಂಧಾನ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಆದರೆ ಅವನು ಅಹಂಕಾರ ಮತ್ತು ಗರ್ವದಿಂದ ಮುಸ್ಲಿಮರ ವಿರುದ್ಧ ತೀವ್ರವಾದ ದಾಳಿ ನಡೆಸಿಲು ಆದೇಶ ನೀಡಿದನು. ಈ ದಾಳಿಯ ವೇಳೆ ಅನೇಕ ಮುಸ್ಲಿಮರು ಗಾಯಾಳು ಮತ್ತು ಹುತಾತ್ಮರಾದರು. ಅವರಲ್ಲಿ ಹಝ್ರತ್ ಅಬ್ಬಾನ್ ಬಿನ್ ಸಈದ್(ರ) ಸಹ ಒಳಪಟ್ಟಿದ್ದರು. ಅವರು ಆಗಷ್ಟೇ ವಿವಾಹವಾಗಿದ್ದ ಪತ್ನಿಯಾದ ಹಝ್ರತ್ ಉಮ್ಮೇ ಅಬ್ಬಾನ್(ರ) ಅತ್ಯಂತ ಧೈರ್ಯ ಮತ್ತು ಸ್ಥೈರ್ಯದಿಂದ ತೀವ್ರವಾಗಿ ಹೋರಾಟ ನಡೆಸಿದರು. ತನ್ನ ಬಾಣಗಳ ಮೂಲಕ ಅನೇಕ ರೋಮನರನ್ನು ವಧಿಸಿದರು. ಅದೇ ರೀತಿಯಲ್ಲಿ ಅವರು ಸಂದರ್ಭ ಸಿಕ್ಕಾಗ ತೋಮಸಿನ ಕಣ್ಣನ್ನು ಗುರಿಯಾಗಿಸಿ ಒಂದು ಬಾಣವನ್ನು ಹಾರಿಸಿದರು. ಅದು ಅವನ ಒಂದು ಕಣ್ಣನ್ನು ಸದಾ ಕಾಲಕ್ಕೆ ಕುರುಡುಗೊಳಿಸಿತು. ಆ ಕಾರಣದಿಂದ ತೋಮಸ್ ತನ್ನ ಸೈನ್ಯ ಸಮೇತ ಮರಳಿ ಕೋಟೆಯೊಳಗೆ ಹೋಗುವಂತೆ ಆಯಿತು.

ಮುಸ್ಲಿಮರು ಡಮಸ್ಕಸನ್ನು ಕಠಿಣವಾದ ರೀತಿಯಲ್ಲಿ ಮುತ್ತಿಗೆ ಹಾಕಿದರು. ಇನ್ನು ಸಹಾಯಗಳು ತಲುಪಲು ಸಾಧ್ಯವಿಲ್ಲವೆಂದು ಡಮಸ್ಕಸ್ ನಿವಾಸಿಗಳಿಗೆ ಖಚಿತವಾಯಿತು. ಆದ್ದರಿಂದ ಅವರೊಳಗೆ ದೌರ್ಬಲ್ಯ ಮತ್ತು ಅಂಜುಬುರುಕು ಉಂಟಾಯಿತು. ಆದ್ದರಿಂದ ಹೆಚ್ಚಿನ ಪರಿಶ್ರಮವನ್ನು ಅವರು ಉಪೇಕ್ಷಿಸಿದರು. ಮುಸ್ಲಿಮರ ಹೃದಯಗಳಲ್ಲಿ ಅವರನ್ನು ಅಧೀನಗೊಳಿಸುವ ಆವೇಶ ವರ್ಧಿಸಿತು ಮತ್ತು ಮುತ್ತಿಗೆ ದೀರ್ಘವಾಗುತ್ತಾ ಹೋಯಿತು. ಕೋಟೆಯನ್ನು ಪ್ರವೇಶಿಸಲು ಹಝ್ರತ್ ಖ಼ಾಲಿದ್(ರ) ಮಾಡಿದ ಉಪಾಯವೇನೆಂದರೆ, ಕೆಲವು ಹಗ್ಗಗಳನ್ನು ತರಿಸಿದರು. ಕೋಟೆಯ ಗೋಡೆಗಳನ್ನು ಏರಿ ಇಳಿಯಲು ಅವುಗಳಲ್ಲಿ ಕಟ್ಟುಗಳನ್ನು ಮಾಡಿಕೊಂಡು ಏಣಿಯಂತೆ ಉಪಯೋಗಿಸಿದರು. ಈ ಉಪಾಯದಿಂದ ಇಸ್ಲಾಮಿನ ಸೈನ್ಯ ಡಮಸ್ಕಸ್ ಪ್ರವೇಶಿಸಿತು. ಇಸ್ಲಾಮಿನ ಸೇನಾಧಿಪತಿಗಳಾದ ನಾಲ್ವರೂ ಪಟ್ಟಣದ ನಡುಭಾಗದಲ್ಲಿ ಪರಸ್ಪರ ಭೇಟಿಯಾದರು. ಹಝ್ರತ್ ಖ಼ಾಲಿದ್(ರ) ಡಮಸ್ಕಸಿನ ಕೆಲವು ಭಾಗಗಳನ್ನು ಮೊದಲೇ ಜಯಿಸಿದ್ದರು. ಆದರೆ ಹಝ್ರತ್ ಅಬೂ ಉಬೈದ(ರ) ಸಂಧಾನವನ್ನು ಒಪ್ಪಿಕೊಂಡ ಕಾರಣದಿಂದ ಜಯಿಸಿದ ಪ್ರದೇಶಗಳಲ್ಲೂ ಸಂಧಾನದ ಶರತ್ತುಗಳನ್ನು ಒಪ್ಪಲಾಯಿತು.

(ಹುಝೂ಼ರ್ ಹೇಳಿದರು:) ಇನ್ನು ಮುಂದೆ, ಹಝ್ರತ್ ಅಬೂಬಕರ್(ರ)ರ ಜೀವಿತದ ಉಳಿದ ಮಗ್ಗಲುಗಳನ್ನು ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

(ಹುಝೂ಼ರ್ ಖುತ್ಬದ ಕೊನೆಯಲ್ಲಿ, ದಕ್ಷಿಣ ಪೆಲಸ್ತೀನ್ ಜಮಾಅತಿನ ಸದರ್ ಆಗಿದ್ದ ಸನ್ಮಾನ್ಯ ಉಮರ್ ಅಬೂ ಅರ್ಕೂಬ್ ಸಾಹಿಬ್, ಮುಠಿಯ ಮೊದಲ ಅಹ್ಮದಿಯಾದ ಸನ್ಮಾನ್ಯ ಶೇಖ್ ನಾಸಿರ್ ಅಹ್ಮದ್ ಸಾಹಿಬ್, ವಖ್ಫೇ ಜದೀದಿನ ಮಾಜಿ ಮುಅಲ್ಲಿಂ ಮಲಿಕ್ ಸುಲ್ತಾನ್ ಅಹ್ಮದ್ ಸಾಹಿಬ್ ಮತ್ತು ಪಾಕಿಸ್ತಾನದ ಮಂಡಿ ಬಹಾಉದ್ದೀನ್ ಜಿಲ್ಲೆಯ ಸನ್ಮಾನ್ಯ ಮಹ್ಬೂಬ್ ಅಹ್ಮದ್ ರಾಜೀಕಿ ಸಾಹಿಬ್ ಇವರ ಬಗ್ಗೆ ವಿವರಿಸಿದರು ಮತ್ತು ಜುಮಾ ನಮಾಝಿ಼ನ ನಂತರ ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, on 02-09-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon